ಓಂ ಶಾಂತಿ, ಬಾಪ್‌ದಾದಾ , ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 31-12-2002

# *ಈ ಹೊಸ ವರ್ಷದಲ್ಲಿ ಸರ್ವ ಖಜಾನೆಗಳನ್ನು ಸಫಲ ಮಾಡಿ ಸಫಲತಾ ಮೂರ್ತಿಗಳಾಗುವ ವಿಶೇಷತೆಯನ್ನು ತೋರಿಸಿ*

(इस नये वर्ष में सर्व खज़ाने सफल कर सफलतामूर्त बनने की विशेषता दिखाओ)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ನವಯುಗ ರಚಯಿತ, ನವ ಜೀವನದಾತಾ ಬಾಪ್‌ದಾದಾ ಹೊಸ ವರ್ಷವನ್ನು ಆಚರಿಸಲು ಬಂದಿದ್ದಾರೆ. ತಾವೆಲ್ಲರೂ ಸಹ ಹೊಸ ವರ್ಷವನ್ನು ಆಚರಿಸಲು ಬಂದಿದೀರೋ, ಅಥವಾ ಹೊಸ ಯುಗವನ್ನು ಆಚರಿಸಲು ಬಂದಿದ್ದೀರೋ? ಹೊಸ ವರ್ಷವನ್ನಂತೂ ಎಲ್ಲರೂ ಆಚರಿಸುತ್ತಾರೆ ಆದರೆ ತಾವೆಲ್ಲರೂ ಹೊಸ ಜೀವನ, ಹೊಸಯುಗ ಹಾಗೂ ಹೊಸ ವರ್ಷ ಮೂರನ್ನೂ ಆಚರಣೆ ಮಾಡುತ್ತಿದ್ದೀರಿ. ಬಾಪ್‌ದಾದಾರವರೂ ಸಹ ತ್ರಿಮೂರ್ತಿ ಶುಭಾಶಯಗಳನ್ನು ಕೊಡುತ್ತಿದ್ದೇವೆ. ಹೊಸ ವರ್ಷದಲ್ಲಿ ಒಬ್ಬರು ಇನ್ನೊಬ್ಬರಿಗೆ ಶುಭಾಶಯಗಳನ್ನು ಕೊಡುತ್ತಾರೆ ಹಾಗೂ ಜೊತೆಯಲ್ಲಿ ಒಂದಲ್ಲ ಒಂದು ಕೊಡುಗೆಯನ್ನು ಕೊಡುತ್ತಾರೆ. ಕೊಡುಗೆಯನ್ನು ಕೊಡುತ್ತೀರಲ್ಲವೇ. ಆದರೆ ಬಾಪ್‌ದಾದಾರವರು ತಮ್ಮೆಲ್ಲರಿಗೆ ಯಾವ ಕೊಡುಗೆಯನ್ನು ಕೊಟ್ಟಿದ್ದಾರೆ? ಗೋಲ್ಡನ್ ಪ್ರಪಂಚದ ಕೊಡುಗೆಯನ್ನು ಕೊಟ್ಟಿದ್ದಾರೆ. ಎಲ್ಲರಿಗೆ ಗೋಲ್ಡನ್ ಪ್ರಪಂಚದ ಕೊಡುಗೆಯು ಸಿಕ್ಕಿದೆಯಲ್ಲವೇ! ಗೋಲ್ಡನ್ ಪ್ರಪಂಚದಲ್ಲಿ, ನವಯುಗದಲ್ಲಿ ಸರ್ವ ಪ್ರಾಪ್ತಿಗಳು ಇರುತ್ತವೆ. ತಮ್ಮ ರಾಜ್ಯದ ನೆನಪಿದೆಯೇ? ಅಲ್ಲಿ ಯಾವುದೇ ಅಪ್ರಾಪ್ತಿಯ ನಾಮ-ರೂಪಗಳೇ ಇರುವುದಿಲ್ಲ. ಇಂತಹ ಕೊಡುಗೆಯನ್ನು ಬಾಪ್‌ದಾದಾರವರ ವಿನಃ ಮತ್ತಾರೂ ಕೊಡಲು ಸಾಧ್ಯವಿಲ್ಲ. ಇಡೀ ವಿಶ್ವದಲ್ಲಿ ಒಂದುವೇಳೆ ಯಾರಾದರೂ ದೊಡ್ಡದಕ್ಕಿಂತ

ದೊಡ್ಡ ಕೊಡುಗೆಯನ್ನು ಕೊಟ್ಟರೂ ಸಹ ಏನನ್ನು ಕೊಡಬಹುದು? ದೊಡ್ಡದಕ್ಕಿಂತ ದೊಡ್ಡ ಕಿರೀಟ ಹಾಗೂ ಸಿಂಹಾಸನವನ್ನು ಕೊಡುತ್ತಾರೆ. ಯಾವಾಗ ಸ್ಥಾಪನೆ ಆಯಿತು. [ಸ್ಥಾಪನೆಯವರು ಮುಂದೆ-ಮುಂದೆ ಕುಳಿತಿದ್ದಾರೆ] ಆಗ ಆದಿಯಲ್ಲಿಯೇ ಬ್ರಹ್ಮಾತಂದೆಯು ಮಕ್ಕಳನ್ನು ಕೇಳುತ್ತಿದ್ದರು - ಒಂದುವೇಳೆ ನಿಮಗೆ ಈಗಿನ ಕಾಲದ ಯಾವುದೇ ರಾಣಿಯು ಕಿರೀಟ ಹಾಗೂ ಸಿಂಹಾಸನವನ್ನು ಕೊಟ್ಟರೆ ತಾವು ಹೋಗುವಿರಾ? ಇದು ನೆನಪು ಇದೆಯಲ್ಲವೇ! ಇದಕ್ಕೆ ಮಕ್ಕಳು ಹೇಳುತ್ತಿದ್ದರು - ಈ ಕಿರೀಟ ಹಾಗೂ ಸಿಂಹಾಸನವನ್ನು ಏನು ಮಾಡುವುದು, ತಂದೆಯು ಸಿಕ್ಕ ಮೇಲೆ ಇನ್ನೇನು ಬೇಕು! ಆದ್ದರಿಂದ ಈ ಚಿನ್ನದ ಪ್ರಪಂಚದ ಕೊಡುಗೆಯ ಮುಂದೆ ಯಾವುದೇ ಕೊಡುಗೆಯು ದೊಡ್ಡದಿರಲು ಸಾಧ್ಯವಿಲ್ಲ. ಕೆಲವು ಮಕ್ಕಳು ಕೇಳುತ್ತಾರೆ - ಅಲ್ಲಿ ಏನೇನು ಪ್ರಾಪ್ತಿಗಳು ಇರುವವು ಎಂದು? ಇದಕ್ಕೆ ಬಾಪ್‌ದಾದಾರವರು ತಿಳಿಸುತ್ತಾರೆ - ಪ್ರಾಪ್ತಿಗಳ ಪಟ್ಟಿಯಂತೂ ಉದ್ದವಾಗಿದೆ ಆದರೆ ಅದನ್ನು ಸಾರ ರೂಪದಲ್ಲಿ ಏನು ಹೇಳುತ್ತೀರಿ! ಅಲ್ಲಿ ಯಾವುದೇ ಅಪ್ರಾಪ್ತವಾದ ವಸ್ತು ಇರುವುದಿಲ್ಲ. ಜೀವನದಲ್ಲಿ ಯಾವುದು ಬೇಕೋ ಅದೆಲ್ಲವೂ ಪ್ರಾಪ್ತಿಯಾಗುತ್ತದೆ ಅಂದಮೇಲೆ ಇಂತಹ ಗೋಲ್ಡನ್ ಕೊಡುಗೆಗೆ ಅಧಿಕಾರಿ ಅತ್ಮರು ಆಗಿದ್ದೀರಿ. ಅಧಿಕಾರಿಗಳು ಆಗಿದ್ದೀರಲ್ಲವೆ? ಡಬಲ್ ವಿದೇಶಿಯರು ಅಧಿಕಾರಿಗಳಾಗಿದ್ದೀರಾ? [ಕೈ ಅಲುಗಾಡಿಸುತ್ತಿದ್ದಾರೆ] ಎಲ್ಲರೂ ರಾಜರಾಗುವಿರಾ? ರಾಜರು ಆಗುವಿರಿ, ಒಳ್ಳೆಯದು. ಇಷ್ಟೊಂದು ಸಿಂಹಾಸನಗಳನ್ನು ತಯಾರು ಮಾಡಬೇಕಾಗುತ್ತದೆ. ಬಾಪ್‌ದಾದಾರವರು ತಿಳಿಸುತ್ತಾರೆ - ಆ ಸಿಂಹಾಸನವಂತೂ ಇದೆ, ಸರ್ವ ಪ್ರಾಪ್ತಿಗಳಿರುತ್ತದೆ. ಆದರೆ ಈ ಸಂಗಮಯುಗದ ಸ್ವರಾಜ್ಯವು ಅದಕ್ಕಿಂತ ಕಡಿಮೆ ಏನೂ ಇಲ್ಲ. ಈಗಲೂ ರಾಜರಾಗಿದ್ದೀರಲ್ಲವೇ! ಪ್ರಜೆಗಳಾಗಿದ್ದೀರಾ ಅಥವಾ ರಾಯಲ್ ಪರಿವಾರದವರಾಗಿದ್ದೀರಾ? ಏನಾಗಿದ್ದೀರಿ? ಒಬ್ಬರೇ ತಂದೆ ಇದ್ದಾರೆ ಅವರು ನಶೆಯಿಂದ ಹೇಳುತ್ತಾರೆ- ನನ್ನ ಒಂದೊಂದು ಮಗುವೂ ಸಹ ರಾಜಾ ಮಗುವಾಗಿದೆ. ರಾಜರಾಗಿದ್ದೀರಲ್ಲವೇ! ರಾಜಯೋಗಿಗಳಾಗಿದ್ದೀರಾ? ಅಥವಾ ಪ್ರಜಾಯೋಗಿಗಳಾಗಿದ್ದೀರಾ? ಈ ಸಮಯದಲ್ಲಿ ಎಲ್ಲರೂ ಹೃದಯ ಸಿಂಹಾಸನಾಧಿಕಾರಿಗಳು, ಸ್ವರಾಜ್ಯಾಧಿಕಾರಿ ರಾಜಾ ಮಕ್ಕಳಾಗಿದ್ದೀರಿ. ಇಷ್ಟೊಂದು ಆತ್ಮಿಕ ನಶೆ ಇರುತ್ತದೆಯಲ್ಲವೇ! ಏಕೆಂದರೆ ಈ ಸಮಯದ ಸ್ವರಾಜ್ಯದಿಂದಲೇ ಭವಿಷ್ಯದ ರಾಜ್ಯವು ಪ್ರಾಪ್ತಿಯಾಗುತ್ತದೆ. ಈ ಸಂಗಮಯುಗವೂ ಬಹಳ-ಬಹಳ-ಬಹಳ-ಬಹಳ ಅಮೂಲ್ಯ, ಶ್ರೇಷ್ಠವಾಗಿದೆ. ಸಂಗಮಯುಗವನ್ನು ಬಾಪ್‌ದಾದಾ ಹಾಗೂ ಎಲ್ಲಾ ಮಕ್ಕಳು ಆರಿತುಕೊಂಡಿದ್ದಾರೆ, ಖುಷಿ-ಖುಷಿಯಲ್ಲಿ ಸಂಗಮಯುಗಕ್ಕೆ ಯಾವ ಹೆಸರನ್ನು ಕೊಡುತ್ತೀರಿ? ಮೋಜಿನ [ಖುಷಿ] ಯುಗ. ಏಕೆ? ಇಲ್ಲಿ ಸಂಗಮದಲ್ಲಿ ಇರುವಂತಹ ಖುಷಿ ಇಡೀ ಕಲ್ಪದಲ್ಲಿ ಎಲ್ಲಿಯೂ ಇರುವುದಿಲ್ಲ. ಕಾರಣವೇನು? ಪರಮಾತ್ಮನ ಮಿಲನದ ಖುಷಿಯು ಇಡೀ ಕಲ್ಪದಲ್ಲಿ ಈ ಸಮಯದಲ್ಲಿ ಮಾತ್ರ ಸಿಗುತ್ತದೆ. ಸಂಗಮಯುಗದ ಒಂದೊಂದು ದಿನವು ಏನಾಗಿದೆ? ಖುಷಿಯೇಖುಷಿಯಾಗಿದೆ. ಖುಷಿ ಇದೆಯಲ್ಲವೇ? ಖುಷಿ ಇದೆ. ತಬ್ಬಿಬ್ಬಾಗುವುದಿಲ್ಲ ತಾನೇ! ಪ್ರತಿಯೊಂದು ದಿನವೂ ಉತ್ಸವವಾಗಿದೆ ಏಕೆಂದರೆ ಉತ್ಸಾಹವಿದೆ. ತಮ್ಮ ಎಲ್ಲಾ ಸಹೋದರ -ಸಹೋದರಿಯರನ್ನು ಪರಮಾತ್ಮ ತಂದೆಯ ಮಕ್ಕಳನ್ನಾಗಿ ಮಾಡಬೇಕು ಎನ್ನುವ ಉಲ್ಲಾಸವಿದೆ, ಉತ್ಸಾಹವಿದೆಯಲ್ಲವೇ!

ಸೇವೆಯ ಉತ್ಸಾಹ- ಉಲ್ಲಾಸವಿರುತ್ತದೆಯಲ್ಲವೇ! ಇದನ್ನು ಮಾಡಬೇಕು, ಅದನ್ನು ಮಾಡಬೇಕು..... ಎಂದು ಯೋಜನೆಗಳನ್ನು ಮಾಡಿಕೊಳ್ಳುತ್ತೀರಲ್ಲವೇ, ಏಕೆಂದರೆ ಯಾವುದಾದರು ಶ್ರೇಷ್ಠ ಪ್ರಾಪ್ತಿಗಳು ಇದೆ ಎಂದರೆ ಅದನ್ನು ಅನ್ಯರಿಗೆ ತಿಳಿಸದೇ ಇರಲು ಸಾಧ್ಯವಾಗುವುದಿಲ್ಲ. ಇದೇ ಸಂಗಮಯುಗದ ಪ್ರಾಪ್ತಿಯು ಗೋಲ್ಡೆನ್

ಪ್ರಪಂಚದಲ್ಲಿಯೂ ಇರುವುದು. ಈಗಿನ ಪುರುಷಾರ್ಥದ ಪ್ರಾಲಬ್ಧವು ಗೋಲ್ಡನ್ ಪ್ರಪಂಚವಾಗಿದೆ ಅಂದಾಗ ಸಂಗಮಯುಗವು ಇಷ್ಟವಾಗುತ್ತದೆಯೋ ಅಥವಾ ಸತ್ಯಯುಗವು ಇಷ್ಟವಾಗುತ್ತದೆಯೋ? ಯಾವುದು ಇಷ್ಟವಾಗುತ್ತದೆ? ಸಂಗಮಯುಗವೇ ಚೆನ್ನಾಗಿದೆಯಲ್ಲವೇ? ಕೇವಲ ಮಧ್ಯ-ಮಧ್ಯದಲ್ಲಿ ಮಾಯೆಯು ಬರುತ್ತದೆ. ಕೆಲವೊಮ್ಮೆ ಸ್ವಲ್ಪ-ಸ್ವಲ್ಪ ಗೊಂದಲಕ್ಕೊಳಗಾಗುತ್ತಾರೆ. ಕೆಲವು ಮಕ್ಕಳು ಸಹಜಯೋಗವನ್ನು ಪರಿಶ್ರಮ ಯೋಗವನ್ನಾಗಿ ಮಾಡಿಬಿಡುತ್ತಾರೆ, ಪರಿಶ್ರಮವಲ್ಲ. ಆದರೆ ಆ ತರಹ ಮಾಡಿಬಿಡುತ್ತಾರೆ. ವಾಸ್ತವದಲ್ಲಿ ಬಹಳ ಸಹಜವಾಗಿದೆ. ಪರಿಶ್ರಮವೆನಿಸುತ್ತದೆಯೇ? ಯಾರಿಗೆ ಪರಿಶ್ರಮವೆನಿಸುತ್ತದೆಯೋ ಅವರು ಕೈಎನ್ನು ಎತ್ತಿರಿ. ಯಾವಾಗಲೋ ಅಲ್ಲ, ಕೆಲ-ಕೆಲವೊಮ್ಮೆ ಪರಿಶ್ರಮವಾಗುತ್ತದೆಯೇ? ಅಥವಾ ಸಹಜವೋ? ಯಾರು ಪರಿಶ್ರಮಯೋಗಿಗಳಾಗಿದ್ದೀರೋ ಅವರು ಕೈಯನ್ನು ಎತ್ತಿರಿ. ಪರಿಶ್ರಮವೆನಿಸುವವರು ಕೈಯನ್ನು ಎತ್ತಿರಿ. ಮಾತೆಯರು ಪರಿಶ್ರಮ ಯೋಗಿಗಳಾಗಿದ್ದೀರೋ ಅಥವಾ ಸಹಜವಾಗುವುದೋ? ಯಾರಾದರೂ ಪರಿಶ್ರಮ ಯೋಗಿಗಳಿದ್ದೀರಾ? ಕೈ ಎತ್ತುವುದಿಲ್ಲ. ಇಷ್ಟು ದೊಡ್ಡ ಸಭೆಯಲ್ಲಿ ಹೇಗೆ ಎತ್ತುತ್ತಾರೆ!

ಎಲ್ಲಾ ಮಕ್ಕಳು ನನ್ನ ಬಾಬಾ ಎಂದು ನಶೆಯಿಂದ ಹೇಳುತ್ತಾರೆ. ನನ್ನ ಬಾಬಾ ಎಂದೆ ಹೇಳುತ್ತೀರಾ? ನನ್ನ ಬಾಬಾ ಆಗಿದ್ದಾರೆಯೋ ಅಥವಾ ದಾದಿಯರ ಬಾಬಾ ಆಗಿದ್ದಾರೆಯೋ? ನನ್ನ ಬಾಬಾ ಅಲ್ಲವೇ! ಪ್ರತಿಯೊಬ್ಬರೂ ಹೇಳುತ್ತಾರೆ - ಮೊದಲು ನನ್ನವರು ಎಂದು. ಈ ರೀತಿ ಇದೆಯೇ? ಈ ಸಿಂಧಿಗಳು ಎಲ್ಲರೂ ಕುಳಿತಿದ್ದಾರಲ್ಲವೇ. ತಂದೆಯು ನನ್ನ ಬಾಬಾ ಆಗಿದ್ದಾರೆಯೋ ಅಥವಾ ಜಾನಕಿ ದಾದಿಯವರ ಬಾಬಾ ಆಗಿದ್ದಾರೆಯೇ? ಪ್ರಕಾಶಮಣಿ ದಾದಿಯವರ ತಂದೆಯೇ? ಯಾರ - ತಂದೆಯಾಗಿದ್ದಾರೆ? ನನ್ನ ಬಾಬಾ ಆಗಿದ್ದಾರೆಯೇ? ಇಡೀ ದಿನದಲ್ಲಿ ಏನು ನೆನಪು ಇರುತ್ತದೆ? ತಂದೆಯು ತಿಳಿಸುತ್ತಾರೆ - **ಬಹಳ ಸಹಜಯುಕ್ತಿಯಾಗಿದೆ – ಎಷ್ಟು ಬಾರಿ ನನ್ನದು-ನನ್ನದು ಎಂದು ಹೇಳುತ್ತೀರಿ ಇಡೀ ದಿನದಲ್ಲಿ ಎಷ್ಟು ಬಾರಿ ನನ್ನದು ಎನ್ನುತ್ತೀರಿ. ಒಂದು ವೇಳೆ ಲೆಕ್ಕವಿಟ್ಟರೆ ಬಹಳಷ್ಟು ಬಾರಿ ನನ್ನದು ಎನ್ನುತ್ತೀರಲ್ಲವೇ ನನ್ನದು ಎಂದು ಮಾತನಾಡುತ್ತಿರುವಾಗ ನನ್ನದು ಎಂದರೆ ಯಾರು? ನನ್ನ ಬಾಬಾ ಕಷ್ಟವೇ? ಆಗಾಗ ಮರೆತು ಹೋಗುತ್ತಿದ್ದೀರಾ? ಬಾಪ್‌ದಾದಾರವರು ಯಾವ ಹೊಸ ಶಬ್ದವನ್ನು ಕೊಡುತ್ತಿಲ್ಲ, ನಾನು ನನ್ನದು ಎಂಬುವ ಶಬ್ದಗಳನ್ನು ಸದಾ ಕಾರ್ಯದಲ್ಲಿ ಉಪಯೋಗಿಸುತ್ತಾ ಇರುತ್ತೀರಿ ಹಾಗಾದರೆ ನಾನು ಯಾರು ಮತ್ತು ನನ್ನವರು ಯಾರು? ಕೆಲವು ಮಕ್ಕಳು ಪರಿಶ್ರಮದ ಪುರುಷಾರ್ಥವನ್ನು ಏಕೆ ಮಾಡುತ್ತಾರೆ? ಬಿಂದು ಸಮೀಪಕ್ಕೆ ಬಂದುಬಿಡಲಿ ಎಂದು ಕೇವಲ ಯೋಚಿಸುತ್ತಾರೆ. ಬಿಂದು, ಬಿಂದು, ಬಿಂದು...... ಮತ್ತು ಬಿಂದು ಜಾರಿಹೋಗುತ್ತದೆ. ಬಿಂದುವಂತೂ ಇದೆ ಆದರೆ ಯಾವ ಬಿಂದು? ನಾನು ಯಾರಾಗಿದ್ದೇನೆ. ತಮ್ಮ ಈ ಸ್ವಮಾನವನ್ನು ಸ್ಮೃತಿಯಲ್ಲಿ ತಂದಾಗ ರಮಣೀಕ ಪುರುಷಾರ್ಥವಾಗಿಬಿಡುತ್ತದೆ, ಕೇವಲ ಜ್ಯೋತಿರ್ಬಿಂದು ಎಂದು ಎಂದುಕೊಂಡರೆ ಪರಿಶ್ರಮವಾಗಿಬಿಡುತ್ತದೆ. ಸಹಜ ಪುರುಷಾರ್ಥ, ಮೋಜಿನ ಪುರುಷಾರ್ಥವನ್ನು ಮಾಡಿ.**

ಈ ಹೊಸ ವರ್ಷದಲ್ಲಿ ಪುರುಷಾರ್ಥವೂ ಶ್ರೇಷ್ಠವಾಗಿರಲಿ ಆದರೆ ಶ್ರೇಷ್ಠತೆಯ ಜೊತೆಗೆ ಮೊದಲು ಸಹಜವೂ ಆಗಿರಬೇಕು, ಶ್ರೇಷ್ಠವೂ ಆಗಿರಬೇಕು. ಹೀಗಿರಲು ಸಾಧ್ಯವೇ? ಎರಡೂ ಜೊತೆಯಿರಲು ಸಾಧ್ಯವಾಗುತ್ತದೆಯೇ? ಡಬಲ್ ವಿದೇಶಿಯರು ಹೇಳಿ, ಆಗುತ್ತದೆಯೇ? ಬಾಪ್‌ದಾದಾ ನೋಡುತ್ತಾರೆ. ಬಾಪ್‌ದಾದಾರವರಂತೂ ಪರಿಶೀಲನೆ ಮಾಡುತ್ತಾ

ಇರುತ್ತಾರಲ್ಲವೇ! ಹಾಗಾದರೆ ಯಾರು ಯಾರು ಪರಿಶ್ರಮಯೋಗಿಗಳಾಗುತ್ತಾರೆ! ಸಹಜಯೋಗಿಯ ಅರ್ಥವು ಆಲಸ್ಯದ ಪುರುಷಾರ್ಥವಲ್ಲ. ಶ್ರೇಷ್ಠವೂ ಆಗಿರಬೇಕು ಮತ್ತು ಸಹಜವೂ ಆಗಿರಬೇಕು ಅಂದಾಗ ಪಾಂಡವರು ಸಹಜಯೋಗಿಗಳಾಗಿದ್ದೀರಾ? ಸಹಜಯೋಗಿಗಳು ಯಾರಿದ್ದೀರಿ ಅವರು ಕೈಯನ್ನು ಎತ್ತಿ. ದೂರದರ್ಶನದಲ್ಲಿ ಬರುತ್ತಾ ಇದೆ ಅದನ್ನು ನೋಡುತ್ತಾರೆ. ಶುಭಾಷಯಗಳು. ಈ ವರ್ಷದಲ್ಲಿ ಯಾರ ಮುಂದೆಯೂ ಯಾವುದೇ ಪರಿಶ್ರಮದಲ್ಲಿ ಬರುವುದಿಲ್ಲ ಏಕೆಂದರೆ ಸಹಜಯೋಗಿಗಳಾಗಿದ್ದೀರಿ ಆದ್ದರಿಂದ ಆಲಸ್ಯದಲ್ಲಿ ಬರಬೇಡಿ.

ಸಮಯ ಪ್ರಮಾಣ ಈ ಹೊಸ ವರ್ಷದಲ್ಲಿ ಎಲ್ಲರೂ ವಿಶೇಷವಾಗಿ ಈ ಲಕ್ಷ್ಯವನ್ನು ಇಟ್ಟುಕೊಳ್ಳಬೇಕು, ಯಾವ ಖಜಾನೆಗಳೆಲ್ಲವೂ ಪ್ರಾಪ್ತಿಯಾಗಿವೆಯೋ ಸಮಯ, ಸಂಕಲ್ಪ, ಗುಣ, ಜ್ಞಾನ, ಶಕ್ತಿಗಳಿವೆ... ಎಲ್ಲದಕ್ಕಿಂತ ದೊಡ್ಡ ಖಜಾನೆ ಸಂಕಲ್ಪವಾಗಿದೆ - ಶ್ರೇಷ್ಠ ಸಂಕಲ್ಪ, ಶುದ್ಧ ಸಂಕಲ್ಪ. ಈ ಎಲ್ಲಾ ಖಜಾನೆಗಳನ್ನು ಪ್ರತಿದಿನ ಸಫಲ ಮಾಡಬೇಕಾಗಿದೆ. ಜಾಸ್ತಿ ಹಂಚಿ. ದಾತನ ಮಕ್ಕಳು ಮಾಸ್ಟರ್ ದಾತನಾಗಿ ಹೆಚ್ಚಿನದಾಗಿ ಹಂಚಿ. ಏಕೆ? ಸಫಲ ಮಾಡುವುದು ಎಂದರೆ ಸಫಲತೆಯನ್ನು ಪ್ರಾಪ್ತಿ ಮಾಡಿಕೊಳ್ಳುವುದು. ಆದ್ದರಿಂದ ಈ ವರ್ಷದಲ್ಲಿ ಇದೇ ವಿಶೇಷತೆಯನ್ನು ಸದಾ ಸ್ಥಿರವಾಗಿಟ್ಟುಕೊಳ್ಳುವುದು. ಸಫಲ ಮಾಡಬೇಕಾಗಿದೆ ಮತ್ತು ಸಫಲತೆಯು ಆಗಿಯೇ ಇದೆ. ಎಲ್ಲರೂ ಹೇಳುತ್ತೀರಲ್ಲವೇ - ಸಫಲತೆಯು ನಮ್ಮ ಜನ್ಮಸಿದ್ಧ ಅಧಿಕಾರವಾಗಿದೆಯೆಂದು. ಅಧಿಕಾರವಾಗಿದೆಯೇ? ಸಫಲ ಮಾಡಿ ಮತ್ತು ಸಫಲತೆಯನ್ನು ಪ್ರಾಪ್ತಿ ಮಾಡಿಕೊಳ್ಳಿ. ಯಾವುದೇ ಕಾರ್ಯವನ್ನು ಮಾಡಿ, ಒಂದಲ್ಲ ಒಂದು ಖಜಾನೆಯನ್ನು ಸಫಲ ಮಾಡಿಕೊಳ್ಳುತ್ತಾ ಹೋಗಿ ಹಾಗೂ ಸಫಲತೆಯ ಅನುಭವವನ್ನು ಮಾಡುತ್ತಾ ನಡೆಯಿರಿ. ಯೋಚಿಸಿ - ಸಫಲತೆಯ ಅಧಿಕಾರವು ತಾವು ಬ್ರಾಹ್ಮಣ ಆತ್ಮರ ವಿನಃ ಮತ್ಯಾರ ಅಧಿಕಾರವಾಗಲು ಸಾಧ್ಯ! ಏಕೆ? ಏಕೆಂದರೆ ತಂದೆಯು ತಮಗೆ ಸಫಲತಾ ಭವ!ದ ವರದಾನವನ್ನು ಕೊಟ್ಟಿದ್ದಾರೆ. ಬಾಪ್‌ದಾದಾ ಸದಾ ಹೇಳುತ್ತಾರೆ - ಒಬ್ಬೊಬ್ಬ ಬ್ರಾಹ್ಮಣ ಆತ್ಮ ಸಫಲತೆಯ ನಕ್ಷತ್ರವಾಗಿದ್ದೀರಿ. ಸಫಲತಾ ಸ್ವರೂಪರಾಗಿದ್ದೀರಿ. ಸಫಲತೆಯ ನಕ್ಷತ್ರಗಳಾಗಿದ್ದೀರಾ ಅಥವಾ ಪರಿಶ್ರಮದ ನಕ್ಷತ್ರಗಳಾಗಿದ್ದೀರಾ? ಬಾಪ್‌ದಾದಾ ಎಲ್ಲಾ ಮಕ್ಕಳನ್ನು ಸಫಲತೆಯ ನಕ್ಷತ್ರಗಳ ಸ್ವರೂಪದಲ್ಲಿ ನೋಡುತ್ತಾರೆ. ನೆನಪಿದೆಯೇ - ಬ್ರಹ್ಮಾತಂದೆಯು ಆದಿಯಲ್ಲಿ ಎಷ್ಟು ಸಮಯದಲ್ಲಿ ಎಲ್ಲವನ್ನು ಸಫಲ ಮಾಡಿದರು? ಅಂತ್ಯದ ತನಕ ತಮ್ಮ ಸಮಯವನ್ನು ಸಫಲ ಮಾಡಿದರು. ಭಲೇ ಕರ್ಮಾತೀತರೂ ಆಗಿಬಿಟ್ಟರು ಆದರೂ ಸಹ ಎಷ್ಟೊಂದು ಪತ್ರಗಳನ್ನು ಬರೆದರು! ಸಮಯವನ್ನು ಸಫಲ ಮಾಡಿದರಲ್ಲವೇ! ಕೊನೆಯ ದಿನವೂ ಸಹ ಮುಖದಿಂದ ಮಹಾವಾಕ್ಯಗಳನ್ನು ಉಚ್ಛಾರಣೆ ಮಾಡಿದರು. ಕೊನೆಯ ದಿನದ ತನಕ ಎಲ್ಲವನ್ನು ಸಫಲ ಮಾಡಿದರು. ಆದ್ದರಿಂದಲೇ ಸಫಲತೆಯನ್ನು ಪ್ರಾಪ್ತಿ ಮಾಡಿಕೊಂಡರು. ಆದ್ದರಿಂದ ಫಾಲೋ ಫಾದರ್. ವಾಸ್ತವದಲ್ಲಿ ಸಂಗಮಯುಗದ ಒಂದೊಂದು ಸಂಕಲ್ಪ, ಒಂದೊಂದು ಸೆಕೆಂಡ್, ಸಮಯ ಸಫಲ ಮಾಡುವುದೇ ಸಫಲತಾಮೂರ್ತಿಗಳಾಗುವುದಾಗಿದೆ. ಎಲ್ಲರೂ ನಿಶ್ಚಯದಿಂದ ಹೇಳುತ್ತೀರಲ್ಲವೇ! ಬ್ರಹ್ಮಾತಂದೆಯೊಂದಿಗೆ ನಮಗೆ ಬಹಳ ಪ್ರೀತಿಯಿದೆ. ಅಂದಮೇಲೆ ಪ್ರೀತಿಯ ಗುರುತಾಗಿದೆ - ತಂದೆಗೆ ಪ್ರಿಯವಾಗಿರುವುದೇ ಮಕ್ಕಳಿಗೂ ಪ್ರಿಯವಾಗಬೇಕು. ಸಮಯ, ಸಂಕಲ್ಪ ಮತ್ತು ಸರ್ವಖಜಾನೆಗಳು ಸಫಲವಾಗಲಿ, ವ್ಯರ್ಥವಾಗದಿರಲಿ. ಪ್ರೀತಿಯ ಗುರುತು ಫಾಲೋ ಫಾದರ್ ಆಗಿದೆ ಅರ್ಥಾತ್ ತಂದೆಯನ್ನು ಅನುಕರಣೆ ಮಾಡುವುದಾಗಿದೆ. ಬ್ರಹ್ಮಾತಂದೆಯು ಯಾವ ವಿಶೇಷತೆಯನ್ನು ತೋರಿಸಿದರು? ಯಾವ ಪ್ಲಾನನ್ನು ಯೋಚಿಸಿದರೋ

ಅದನ್ನು ಸೆಕೆಂಡಿನಲ್ಲಿ ಮಾಡಿದರು. ಕೇವಲ ಯೋಚಿಸಲಿಲ್ಲ, ಕೇವಲ ಯೋಜನೆಯನ್ನು ಮಾಡಲಿಲ್ಲ, ಆದರೆ ಅದನ್ನು ಪ್ರತ್ಯಕ್ಷದಲ್ಲಿ ಮಾಡಿ ತೋರಿಸಿದರು. ಈ ರೀತಿ ಇದ್ದೀರಾ? ಫಾಲೋ ಮಾಡುವವರಾಗಿದ್ದೀರಲ್ಲವೇ. ಒಳ್ಳೆಯದು.

ಇಂದು ಹೊಸ ವರ್ಷವನ್ನು ಆಚರಿಸಲು ಅನೇಕರು ಬಂದುಬಿಟ್ಟಿದ್ದೀರಿ ಒಳ್ಳೆಯದು. ಒಂದುವೇಳೆ ಹಾಲ್ ಚಿಕ್ಕದಾದರೂ ಹೃದಯವಂತೂ ದೊಡ್ಡದಾಗಿದೆ. ನೋಡಿ ಹೃದಯವು ದೊಡ್ಡದಾಗಿರುವುದರಿಂದ ಸಮಾವೇಶ ಆಗಿಬಿಟ್ಟಿದ್ದೀರಲ್ಲವೇ [ಇಂದು ಸಭೆಯಲ್ಲಿ 18-19 ಸಾವಿರ ಸಹೋದರ-ಸಹೋದರಿಯರು ಕುಳಿತಿದ್ದಾರೆ] ಎಲ್ಲರೂ ಹೊರಗಡೆ ಕುಳಿತಿದ್ದರೂ ಕೇಳುತ್ತಿದ್ದೀರಲ್ಲವೇ? ಹೊರಗಡೆ ಕುಳಿತುಕೊಂಡಿರುವವರು ಕೇಳುತ್ತಿದ್ದಾರೆ ಅವರಂತೂ ಕಾಣಿಸುತ್ತಿಲ್ಲ. ಬಾಪ್‌ದಾದಾರವರು ಕೇಳಿದರು - ವಿದೇಶದಲ್ಲಿ ಎಲ್ಲದಕ್ಕಿಂತ ಹೆಚ್ಚಿನದಾಗಿ ಆಸ್ಟ್ರೇಲಿಯಾದವರು 12 ಗಂಟೆಯವರೆಗೆ ಕುಳಿತುಕೊಳ್ಳುತ್ತಾರೆ. ರಾತ್ರಿ 12 ಗಂಟೆಯವರೆಗೆ ಕುಳಿತುಕೊಳ್ಳುತ್ತಾರೆ ಮತ್ತು ಅಮೃತವೇಳೆ 4 ಗಂಟೆಗೆ ಏಳುತ್ತಾರೆ ಆದ್ದರಿಂದ ಬಾಪ್‌ದಾದಾರವರು ಇಂದು ಆಸ್ಟ್ರೇಲಿಯಾವನ್ನು ನೆನಪು ಮಾಡಿದರು. ಆಸ್ಟ್ರೇಲಿಯಾದವರು ಕೇಳುತ್ತಿದ್ದಾರೆ - ಆಸ್ಟ್ರೇಲಿಯಾದವರು ಕೈಯನ್ನು ಎತ್ತಿರಿ. ತ್ರಿಮೂರ್ತಿ ಶುಭಾಷಯಗಳು ಮೊದಲು ಆಸ್ಟ್ರೇಲಿಯಾದವರಿಗೆ ನಂತರ ಎಲ್ಲರಿಗೆ.

ಈ ವರ್ಷದ ಲಕ್ಷ್ಯವಂತೂ ತಿಳಿಸಲಾಯಿತು. ಸಫಲ ಮಾಡಿಕೊಳ್ಳಿ, ಸಫಲತೆಯಂತೂ ಆಗಿಯೇ ಇದೆ. ಇದನ್ನು ಎಲ್ಲರೂ ಪಕ್ಕಾ ಮಾಡಿಕೊಂಡಿದ್ದೀರಾ? ಸಫಲ ಮಾಡಬೇಕಾಗಿದೆ. ವ್ಯರ್ಥವಲ್ಲ. ಸಂಗಮಯುಗವು ಸಮರ್ಥಯುಗವಾಗಿದೆ. ಸಫಲತೆಯ ಯುಗವಾಗಿದೆ. ವ್ಯರ್ಥದ್ದಲ್ಲ. 63 ಜನ್ಮಗಳು ವ್ಯರ್ಥವಾಗಿ ಸಮಾಪ್ತಿಯಾಯಿತು. ಈಗ ಈ ಚಿಕ್ಕಯುಗವು ಸಫಲ ಮಾಡಿಕೊಳ್ಳುವ ಯುಗವಾಗಿದೆ. ಒಂದುವೇಳೆ ಸಮಯವನ್ನು ಸಫಲ ಮಾಡಿಕೊಂಡರೆ ಭವಿಷ್ಯದಲ್ಲಿಯೂ ಅರ್ಧಕಲ್ಪದ ಪೂರ್ಣ ಸಮಯ ರಾಜ್ಯಾಧಿಕಾರಿಗಳಾಗುತ್ತೀರಿ, ಒಂದುವೇಳೆ ಕೆಲವೊಮ್ಮೆ ಮಾತ್ರ ಸಫಲ ಮಾಡಿಕೊಂಡರೆ ಕೆಲವೊಮ್ಮೆ ಮಾತ್ರ ರಾಜ್ಯಾಧಿಕಾರಿಗಳಾಗುವಿರಿ. ಸಮಯದ ಸಫಲತೆಯ ಪ್ರಾಲಬ್ಧವು ಇದಾಗಿದೆ ಶ್ವಾಸವನ್ನು ಸಫಲ ಮಾಡಿಕೊಂಡರೆ 21 ಜನ್ಮಗಳೂ ಆರೋಗ್ಯವಂತರಾಗುತ್ತೀರಿ. ನಡೆಯುತ್ತಾ-ನಡೆಯುತ್ತಾ ಹೃದಯಾಘಾತವಾಗುವುದಿಲ್ಲ. ಕೆಲವರ ಹೃದಯಬಡಿತವು ನಿಂತುಹೋಗುತ್ತದೆ, ಕೆಲವರ ನಾಳಗಳು ನಿಂತುಹೋಗುತ್ತವೆ. ಆದರೆ ಶ್ವಾಸವನ್ನು ಸಫಲ ಮಾಡಿಕೊಂಡಾಗ ಇವೆಲ್ಲವೂ ಆಗುವುದಿಲ್ಲ.

ಜ್ಞಾನದ ಖಜಾನೆಯನ್ನೂ ಸಫಲ ಮಾಡಿಕೊಂಡರೆ ಜ್ಞಾನದ ಅರ್ಥಾತ್ ತಿಳುವಳಿಕೆಯಾಗಿದೆ, ಸತ್ಯಯುಗದಲ್ಲಿ ಎಷ್ಟು ಬುದ್ಧಿವಂತರಾಗುತ್ತೀರಿ ಎಂದರೆ ಅಲ್ಲಿ ನಿಮಗೆ ಯಾವುದೇ ಮಂತ್ರಿಗಳ ಅವಶ್ಯಕತೆಯಿರುವುದಿಲ್ಲ. ಇಂದಿನ ಕಾಲದಲ್ಲಂತೂ ನೋಡಿ, ಪ್ರಮಾಣವಚನವನ್ನು ಸ್ವೀಕರಿಸುತ್ತಿದ್ದಂತೆಯೇ ಮೊದಲು ಮಂತ್ರಿಮಂಡಲವನ್ನು ರಚಿಸುತ್ತಾರೆ. ಅಲ್ಲಿ ಜೊತೆಗಾರರಿರುತ್ತಾರೆ ಆದರೆ ಮಂತ್ರಿಗಳಿರುವುದಿಲ್ಲ. ರಾಯಲ್ ಪರಿವಾರದವರು ಪ್ರತಿಯೊಂದು ದರ್ಬಾರಿನಲ್ಲಿ ಕುಳಿತುಕೊಳ್ಳುವ ಕಿರೀಟಧಾರಿಗಳಾಗಿರುತ್ತಾರೆ. ರಾಯಲ್ ಪರಿವಾರದವರೇನೂ ಕಡಿಮೆಯಲ್ಲ, ಭಲೆ ಸಿಂಹಾಸನದ ಮೇಲೆ ಕುಳಿತುಕೊಳ್ಳದೇ ಇರಬಹುದು ಆದರೆ ಪದವಿಯು ಒಂದೇ ರೀತಿಯಿರುತ್ತದೆ. ಆದ್ದರಿಂದ ಸಿಂಹಾಸನಾಧಿಕಾರಿಗಳು ಕೆಲವರಷ್ಟೇ ಆಗುತ್ತಾರೆ ಎಂದು ಯೋಚಿಸಬೇಡಿ. ತಾವೆಲ್ಲರೂ ಸಹ ರಾಜ ದರ್ಬಾರಿನಲ್ಲಿ

ರಾಜ್ಯಾಧಿಕಾರಿಗಳ ರೂಪದಲ್ಲಿ ಇರುತ್ತೀರಿ. ತಮ್ಮ ತಲೆಯ ಮೇಲೂ ಕಿರೀಟವಿರುತ್ತದೆ ಮತ್ತು ತಮಗೆ ಪೂರ್ಣ ಅಧಿಕಾರವಿರುತ್ತದೆ. ಅಂದಮೇಲೆ ಏನಾಗುತ್ತೀರಿ? ನಂಬರ್‌ವನ್ ಆಗುತ್ತೀರಾ ಅಥವಾ ನಂಬರ್‌ವಾರ್ ಆಗುತ್ತೀರಾ? ಹಾಗಾದರೆ ಏನು ಮಾಡಬೇಕಾಗುತ್ತದೆ ಎಂದು ಗೊತ್ತಿದೆಯೇ? ಸಾಹಸ(ಧೈರ್ಯ)ವನ್ನು ತೋರಿಸಿದಿರಿ, ಇದು ತುಂಬಾ ಚೆನ್ನಾಗಿದೆ. ಆದರೆ ನಂಬರ್‌ವನ್ ಆಗುವುದಕ್ಕೋಸ್ಕರ ಮೊದಲು ವಿನ್ [ವಿಜಯಿ] ಆಗಬೇಕಾಗಿದೆ. ಮಾಡುತ್ತಿದ್ದೀರಲ್ಲವೇ! ಮಾಡುತ್ತೇವೆ ಎಂದು ಹೇಳಬಾರದು. ಮಾಡುತ್ತಿದ್ದೇವೆ. ಅನ್ಯರು ಕೇಳುತ್ತಿದ್ದಾರೆ.

ಇಂದು ಸಿಂಧ್ನ ಹಳೆಯ ಬ್ರಹ್ಮ ತಂದೆಯ ಜೊತೆಗಾರರು ಅನೇಕರು ಬಂದಿದ್ದಾರೆ. ಅವರು ಕೈಯನ್ನು ಎತ್ತಿ, ಹಿಂದಿಯವರಲ್ಲ ಸಿಂಧಿಯವರು, ಮಕ್ಕಳೇ ಏಳಿ - ಪರಿವಾರಕ್ಕೆ ಪರಿವಾರವೇ ಬಂದಿದ್ದೀರಿ. ಒಳ್ಳೆಯದು. ಯಾವುದಾದರೂ ಚಮತ್ಕಾರವನ್ನು ಮಾಡಿ ತೋರಿಸುವಿರಲ್ಲವೇ! ಏನನ್ನು ತೋರಿಸುತ್ತೀರಿ? [ಸಂದೇಶವನ್ನು ಕೊಡುತ್ತೇವೆ] ಅದನ್ನಂತೂ ಮಾಡುತ್ತಲೇ ಇದ್ದೀರಿ. ಒಳ್ಳೆಯದು. 38 ಜನ ಬಂದಿದ್ದೀರಿ. ಆದ್ದರಿಂದ ಏನು ಕಮಾಲ್ ಮಾಡುತ್ತೀರಿ? ಹೋಗಲಿ ಹೆಚ್ಚಿಗೆ ಹೇಳುವುದಿಲ್ಲ, ಚಿಕ್ಕ ಮಾತನ್ನು ಹೇಳುತ್ತೇನೆ. ಮಾಡಲು ತಯಾರಿದ್ದೀರಾ? ಮಕ್ಕಳೂ ಕಮಾಲ್ ಮಾಡುತ್ತೀರಲ್ಲವೇ? [35ಲಕ್ಷ ಆತ್ಮರನ್ನು ತಯಾರು ಮಾಡುತ್ತೇವೆ] ಪದಮ ಗುಣದಷ್ಟು ಶುಭಾಶಯಗಳು. ತಾವಂತೂ ದೊಡ್ಡ ಮಾತನ್ನು ಹೇಳಿಬಿಟ್ಟಿದ್ದದೀರಿ ಆದರೆ ಬಾಪ್‌ದಾದಾ ಚಿಕ್ಕ ಮಾತನ್ನು ಹೇಳುತ್ತಾರೆ - ಒಬ್ಬೊಬ್ಬರನ್ನು ಕರೆತನ್ನಿ. ಮಕ್ಕಳಾಗಿದ್ದೀರಿ ಮಕ್ಕಳನ್ನು ಕರೆತನ್ನಿ. ಮಾತೆಯರು ಸಹೋದರರನ್ನು ಅಥವಾ ಸಹೋದರಿಯರನ್ನು ಕರೆದುಕೊಂಡು ಬನ್ನಿ ಆದರೆ ಒಬ್ಬೊಬ್ಬರನ್ನು ಕರೆತರಬೇಕು. ಈ ಗ್ರೂಪನ್ನು ನೋಡಿ, ತಾವು ಇವರಿಗೆ ಮಾರ್ಗದರ್ಶನವನ್ನು ಕೊಡಬೇಕು, ಮುಂದಿನ ವರ್ಷಕ್ಕೆ ಕರೆದುಕೊಂಡೇ ಬರಬೇಕು, ಡಬಲ್ ಗ್ರೂಪನ್ನು ಕರೆದುಕೊಂಡು ಬರಬೇಕು. ಬಾಪ್‌ದಾದಾರವರು ಇದನ್ನೇ ಇಚ್ಛಿಸುತ್ತಾರೆ - ಎಲ್ಲಿಂದ ಆದಿಯಾಯಿತೋ ಅಲ್ಲಿಂದಲೇ ಪ್ರತ್ಯಕ್ಷವಾಗಬೇಕಾಗಿದೆ. ದಯೆ ಬರುತ್ತದೆಯಲ್ಲವೇ! ಬ್ರಹ್ಮಾತಂದೆಯ ದೇಶದ ನಿವಾಸಿಗಳಾಗಿದ್ದೀರಿ ಅಂದಾಗ ದೇಶವಾಸಿಗಳೊಂದಿಗೆ ಪ್ರೀತಿಯಿರುತ್ತದೆ.

ತಮ್ಮ ಬಳಿ ಬಹಳ ಖಜಾನೆಗಳಿವೆ, ಗುಣಗಳ ಖಜಾನೆಯು ಎಷ್ಟೊಂದು ದೊಡ್ಡದಿದೆ, ಶಕ್ತಿಗಳ ಖಜಾನೆಯು ಎಷ್ಟೊಂದು ದೊಡ್ಡದಿದೆ ಆದ್ದರಿಂದ ಗುಣದಾನ, ಶಕ್ತಿಗಳ ದಾನ ಮಾಡುವುದರಿಂದ ಮಾಸ್ಟರ್ ದಾತರಾಗಿ. ಯಾರೇ ಬರಲಿ ಭಲೆ ಸಂಭಂದದಲ್ಲಿ ಬರಲಿ, ಸಂಪರ್ಕದಲ್ಲಾದರೂ ಬರಲಿ ಆದರೆ ಅವರಿಗೆ ಒಂದಲ್ಲ ಒಂದು ಗುಣ ಅಥವಾ ಶಕ್ತಿಯ ಕೊಡುಗೆಯನ್ನು ಕೊಡಬೇಕು. ಯಾರೂ ಸಹ ಖಾಲಿ ಕೈಯಲ್ಲಿ ಹೋಗಬಾರದು. ಮತ್ತೇನೂ ಇಲ್ಲದಿದ್ದರೂ ಸಹ ತಂದೆಯ ಸಂದೇಶದ ಮಧುರ ಮಾತುಗಳ ಕೊಡುಗೆಯನ್ನು ಕೊಡುವುದು. ಜಗತ್ತಿನವರಂತೂ ಯಾವುದೇ ಉತ್ಸವವಾಗುತ್ತದೆ ಎಂದರೆ ಒಬ್ಬರು ಇನ್ನೊಬ್ಬರ ಬಾಯಿಯನ್ನು ಸಿಹಿ ಮಾಡಿಸುತ್ತಾರೆ ಆದರೆ ಬಾಪ್‌ದಾದಾರವರು ತಿಳಿಸುತ್ತಾರೆ - ಬಾಯಿಯನ್ನು ಸಿಹಿ ಮಾಡಿಸಲೇಬೇಕಾಗಿದೆ ಆದರೆ ಅದರ ಜೊತೆಗೆ ತಮ್ಮ ಮಧುರ ಮುಖವನ್ನೂ ತೋರಿಸಬೇಕಾಗಿದೆ. ಕೇವಲ ಬಾಯಿ ಮಧುರವಲ್ಲ ಮುಖವೂ ಸಹ ಮಧುರ. ಇಷ್ಟೊಂದು ಮಧುರತೆಯು ಜಮಾ ಆಗಿದೆಯಲ್ಲವೇ! ಇದನ್ನು ಹಂಚಿದರೂ ಸಹ ಸಂಪನ್ನವಾಗಿರಿ ಮತ್ತು ಈ ಖಜಾನೆಯಂತೂ ಎಷ್ಟು ಹಂಚುತ್ತೀರೋ ಅಷ್ಟು ವೃದ್ಧಿಯಾಗುವುದು, ಕಡಿಮೆಯಾಗುವುದಿಲ್ಲ. ಆದ್ದರಿಂದ ಈ ವರ್ಷದಲ್ಲಿ ನೋಟ್ ಮಾಡಿಕೊಳ್ಳಬೇಕು. ಯಾವುದೇ ಆತ್ಮ ಬರಲಿ ಅವರಿಗೆ ಏನನ್ನಾದರೂ ಕೊಟ್ಟಿದ್ದೇವೆಯೇ? ಒಂದುವೇಳೆ ಕೇಳುವಂತಹವರಲ್ಲವೆಂದರೆ ಮಧುರ ಶಕ್ತಿಶಾಲಿ ದೃಷ್ಟಿಯನ್ನು

ಕೊಡುವುದು ಆದರೆ ಅವಶ್ಯವಾಗಿ ಕೊಡಲೇಬೇಕಾಗಿದೆ. ಖಾಲಿಯಾಗಿ ಹೋಗಬಾರದು ಇದಂತೂ ಸಹಜವಾಗಿದೆಯಲ್ಲವೇ! ಅಥವಾ ಪರಿಶ್ರಮವಾಗಿದೆಯೇ? ಡಬಲ್ ವಿದೇಶಿ ಯುವಕರ ಗ್ರೂಪ್ ನೊಂದಿಗೆ: ಯುವಕರಲ್ಲಿ ಎಲ್ಲದಕ್ಕಿಂತಲೂ ಶ್ರೇಷ್ಠ ಶಕ್ತಿಯಾದ ಪರಿವರ್ತನಾ ಶಕ್ತಿ ಇರಬೇಕು. ಯೋಚಿಸಿದಿರಿ ಅರ್ಥಾತ್ ಮಾಡಿಬಿಡಬೇಕು. ಯುವಕರು ಪ್ರತಿಜ್ಞೆಗಳನ್ನು ಬಹಳ ಮಾಡಿದ್ದೀರಲ್ಲವೇ? ಬಾಪ್‌ದಾದಾ ಸಮಾಚಾರವನ್ನು ಕೇಳಿಸಿಕೊಂಡರು. ಯುವಕರು ಯಾವ ರೀತಿಯಾಗಿದ್ದಾರೆ ಯುವಕರೆಲ್ಲರೂ ಕೈಯನ್ನು ಅಳುಗಾಡಿಸುತ್ತಿದ್ದಾರೆ ಎಲ್ಲರೂ ತಿಲಕಧಾರರಾಗಿ ಬಂದಿದ್ದೀರಿ ವಿಶೇಷ ರೆಫ್ರೆಶ್ಮೆಂಟ್ ಪಡೆದಿರುವ ತಿಲಕಧಾರಿಗಳು ಎದ್ದು ನಿಲ್ಲಿರಿ. (ತಿಲಕವನ್ನು ಇಟ್ಟುಕೊಂಡು ಕುಳಿತಿದ್ದಾರೆ) ಒಳ್ಳೆಯದು. ನೆನಪಿಟ್ಟುಕೊಂಡಿದ್ದೀರಿ. ಆತ್ಮಹೊಳೆಯುತ್ತಿದೆ ಅಲ್ಲವೇ? ಯಾರಾದರೆ ಈ ಟ್ರೈನಿಂಗ್ ನಿಂದ ಗೋಲ್ಡನ್ ಹಾರ್ಟ್ ತಯಾರಾಗಿದೆ ಎಂದು ಭಾವಿಸುತ್ತಿದ್ದೀರೋ ಅವರು ಕೈಯನ್ನು ಎತ್ತಿರಿ. ಗೋಲ್ಡನ್ ಸ್ಟಾರ್ (ಸ್ವರ್ಣಿಮ ನಕ್ಷತ್ರವಲ್ಲ) ಗೋಲ್ಡನ್ ಹಾರ್ಟ್ (ಸ್ವರ್ಣ ಹೃದಯ) ತಯಾರಾಗಬೇಕು. ಹಾಗಾದರೆ ಸಫಲತಾ ಮೂರ್ತಿಯರಾಗಿಬಿಟ್ಟಿದ್ದೀರಿ. ವಿಮಾನದಲ್ಲಿ ಹಿಂತಿರುಗಿ ಹೋಗುತ್ತಿರುವಾಗ ಮತ್ತೆ ಗೋಲ್ಡನ್ ಹಾರ್ಟ್ ಮೇಲೆ ಕೆಳಗೆ ಆಗುವುದಿಲ್ಲ ತಾನೆ! ನಿಮ್ಮ ದೇಶಕ್ಕೆ ಹೋದ ನಂತರ ಗೋಲ್ಡನ್ ಸಿಲ್ವರ್ ಆಗಿ ಬಿಡುವುದಿಲ್ಲ ತಾನೇ? ಆಗುವುದಿಲ್ಲ ತಾನೇ? ಭಾರತ ದೇಶದ ಆತ್ಮರನ್ನು ಎಚ್ಚರಗೊಳಿಸುವ ರೀತಿ ತಯಾರಾಗಿರಿ. ಭಾರತ ದೇಶವನ್ನು ಎಚ್ಚರಗೊಳಿಸುತ್ತೀರಾ? ಭಾರತ ದೇಶದವರು ಬಹಳ ಸೊಟ್ಟ ಪ್ರಶ್ನೆಗಳನ್ನು ಹಾಕುತ್ತಾರೆ. ಸಮಾಧಾನವನ್ನು ಹೇಳುತ್ತೀರಾ. ನಿಮ್ಮೆಲ್ಲರ ಫೋಟೋ ಟಿ.ವಿಯಲ್ಲಿ ಬರುತ್ತಿದೆ. ನಿಮ್ಮೆಲ್ಲರಿಗೂ ಭಾರತ ದೇಶವನ್ನು ಎಚ್ಚರಗೊಳಿಸುವ ಆಹ್ವಾನ ಬರುತ್ತದೆ. ಎವರ್ ರೆಡಿಯಾಗಿ ಇರಬೇಕು. ಒಂದು ವೇಳೆ ಟಿಕಟ್ ಇಲ್ಲದಿದ್ದರೂ ಸಿಕ್ಕು ಬಿಡುತ್ತದೆ. ಬಾಪ್‌ದಾದಾರವರಿಗೆ ಡಬಲ್ ವಿದೇಶಿಯರ ವಿಶೇಷತೆ ತಿಳಿದಿದೆ. ಒಂದು ವರ್ಷ ಮಿಲನ ಮಾಡಿಕೊಳ್ಳುತ್ತಾರೆ. ಮತ್ತೆ ವರ್ಷದಲ್ಲಿ ವರ್ಷವೆಲ್ಲ ತಯಾರು ಮಾಡಿಕೊಳ್ಳುತ್ತಾರೆ. ಎಷ್ಟು ದೇಶಗಳ ಯುವಕರಿದ್ದಾರೆ? (21 ದೇಶಗಳವರಿದ್ದಾರೆ) ಬಾಪ್‌ದಾದಾರವರಿಗೆ ತಿಳಿದಿದೆ ಈ ಗೋಲ್ಡನ್ ಹಾರ್ಟ್ ಅದ್ಭುತವನ್ನು ಮಾಡುತ್ತದೆ. ಗಮನ ಚೆನ್ನಾಗಿ ಇಟ್ಟುಕೊಳ್ಳುತ್ತಾರೆ. ಈ ಬಾರಿ ಹೆಚ್ಚಾಗಿ ಸ್ವಪುರುಷಾರ್ಥದ ಮೇಲೆ ಅಂಡರ್ ಲೈನ್ ಮಾಡಿಕೊಂಡಿದ್ದಾರೆ. ಗ್ರೂಪ್ ಗ್ರೂಪಾಗಿ ತಯಾರು ಮಾಡುವುದರಿಂದ ಗಮನ ಬರುತ್ತದೆ. ಇಡೀ ಸಂಘಟನೆಯ ಬದಲು ಗ್ರೂಪ್ ಆಗಿ ಚೆನ್ನಾಗಿದೆ. ಆದರೆ ಪಾಸಿಟಿವ್ ಆಗಿ ಇರಬೇಕು.

ಬಾಪ್‌ದಾದಾ ಪ್ರತಿಯೊಂದು ಗ್ರೂಪ್ ನವರನ್ನು ನಿಲ್ಲಿಸುತ್ತಿದ್ದಾರೆ. (ಅಂತರ್ಮುಖಿ ಗ್ರೂಪ್ ಅವರೊಂದಿಗೆ ಮಾತನಾಡುತ್ತಿದ್ದಾರೆ) ಒಳ್ಳೆಯ ಪುರುಷಾರ್ಥವನ್ನು ಮಾಡಿದ್ದೀರಿ. ಬಾಪ್‌ದಾದಾ ನೋಡುತ್ತಿದ್ದಾರೆ ಪ್ರತಿಯೊಂದು ಗ್ರೂಪ್ ನವರು ಯಾರಿಗವರು ಮುಂದಕ್ಕೆ ಹೋಗಬೇಕು ಎಂದುಕೊಳ್ಳುತ್ತಿದ್ದಾರೆ. ಈರ್ಷ್ಯೆ ಇಲ್ಲ ಆದರೆ ಓಡುತ್ತಿದ್ದಾರೆ. ಒಳ್ಳೆಯದು. ಅಂತರ್ಮುಖಿ... ಸದಾ ಸುಖಿ, (ಶಾಂತಿ ಗ್ರೂಪ್ ನವರೊಂದಿಗೆ ಮಾತನಾಡುತ್ತಿದ್ದಾರೆ) ಶಕ್ತಿ ಗ್ರೂಪ್ ಅವರನ್ನು ಕೇಳುತ್ತಿದ್ದಾರೆ. ಪ್ರತ್ಯಕ್ಷತೆಯ ಧ್ವಜವನ್ನು ಯಾವಾಗ ಹಾರಿಸುತ್ತೀರಿ? ಎಂದು. ಶಕ್ತಿಯರು ಧ್ವಜವನ್ನು ಹಾರಿಸುತ್ತೀರಿ ತಾನೇ? ಪ್ರತ್ಯಕ್ಷತೆಯ ಧ್ವಜ ಶಕ್ತಿಯರೇ ಹಾರಿಸಬೇಕಲ್ಲವೇ? ಒಳ್ಳೆಯದು. ಪರಸ್ಪರ ಆತ್ಮಿಕ ಸಂಭಾಷಣೆಯನ್ನು ಮಾಡಿಕೊಂಡು ದಿನಾಂಕವನ್ನು ನಿರ್ಣಯ ಮಾಡಿಕೊಳ್ಳಬೇಕು. ಇತರ ವಿಷಯಗಳ ಬಗ್ಗೆ ಹೇಗಾದರೆ ದಿನಾಂಕವನ್ನು ನಿರ್ಣಯಿಸಿಕೊಳ್ಳುತ್ತಿರೋ, ಹಾಗೆಯೇ ಪ್ರತ್ಯಕ್ಷತೆಯ ದ್ವಜವನ್ನು ಹೇಗೆ ಹಾರಿಸಬೇಕು ಎಂಬ ಆ ದಿನಾಂಕವನ್ನು ನಿರ್ಣಯಿಸಿರಿ. ಹಾರಿಸುತ್ತಿರಲ್ಲವೇ? (ಮಹಾವೀರ್ ಗ್ರೂಪ್ ನೊಂದಿಗೆ ಮಾತನಾಡುತ್ತಿದ್ದಾರೆ) ಮಹಾವೀರ್ ಗ್ರೂಪ್ ಏನು

ಮಾಡುತ್ತೀರಿ? ಈ ವರ್ಷಕ್ಕೆ ಬೀಳ್ಕೊಡಿಗೆಯನ್ನು ಕೊಡುವುದರೊಂದಿಗೆ ಮಾಯೆಗೂ ಸಹ ಸದಾ ಕಾಲಕ್ಕಾಗಿ ಬಿಳ್ಕೊಡುಗೆಯನ್ನು ಕೊಡಿ. ಮಾಯೆಗೆ ಬೇಡ್ಕೊಡಿಗೆಯನ್ನು ಕೊಡುತ್ತೀರಾ, ಮಾಯೆ ಬಂದರೂ ಪರವಾಗಿಲ್ಲವೇ? **ಮಹಾವೀರ್ ಅರ್ಥಾತ್- ಬ್ರಹ್ಮಾ ತಂದೆ ಏನು ಹೇಳುತ್ತಿದ್ದರೋ, ಏನನ್ನು ಮಾಡುತ್ತಿದ್ದರೋ, ಏನನ್ನು ಯೋಚಿಸುತ್ತಿದ್ದರೋ ಅದನ್ನೇ ತಕ್ಷಣ ಮಾಡುತ್ತಿದ್ದರು. ತಕ್ಷಣ ದಾನವನ್ನು ಮಾಡಿ ಮಹಾಪುಣ್ಯವನ್ನು ಸಂಪಾದಿಸಿಕೊಳ್ಳುತ್ತಿದ್ದರು. ಮಹಾವೀರರಿಗೂ ಇದೇ ಲಕ್ಷ್ಯವಿದೆಯಲ್ಲವೇ? ಮಾಡುತ್ತೀರಾ? ಒಳ್ಳೆಯದು. ಧೈರ್ಯವಂತೂ ಬರುತ್ತದೆ.** (ವಿದೇಶಗಳಿಂದ ಚಿಕ್ಕ ಮಕ್ಕಳ ಗ್ರೂಪು ಬಂದಿದ್ದಾರೆ) ಎಲ್ಲರೂ ತಮ್ಮ ತಮ್ಮ ಗುರುತನ್ನು ಇಟ್ಟುಕೊಂಡಿದ್ದಾರೆ. ಯುವಕರು ತಿಲಕವನ್ನು ಇಟ್ಟುಕೊಂಡಿದ್ದಾರೆ. ಚಿಕ್ಕ ಮಕ್ಕಳು ಬ್ಯಾನರ್ ಅನ್ನು ಹಾಕಿಕೊಂಡು ಕೈಯಲ್ಲಿ ಶಿವ ತಂದೆಯ ಧ್ವಜವನ್ನು ಹಿಡಿದುಕೊಂಡಿದ್ದಾರೆ. ದೇವದೂತರಿಂದ ದೇವತೆಯಾಗಿಬಿಟ್ಟಿದ್ದಾರೆ. ಎಷ್ಟು ಚೆನ್ನಾಗಿದೆ...ದೇವತೆ ಅರ್ಥಾತ್ ದಿವ್ಯ ಗುಣವುಳ್ಳವರು. ದಿವ್ಯ ಗುಣಗಳನ್ನು ಎಂದಿಗೂ ಬಿಡಬಾರದು. ಮಕ್ಕಳಿಗೆ ಉತ್ಸಾಹ ಉಲ್ಲಾಸಗಳು ಹೆಚ್ಚಾಗುತ್ತವೆ.

ಭಾರತ ದೇಶದ ಮಕ್ಕಳು ಸಹ ಎದ್ದು ನಿಲ್ಲಿರಿ. (ಭಾರತ ದೇಶದಿಂದ 1000 ಜನ ಮಕ್ಕಳು ಬಂದಿದ್ದಾರೆ) ಒಳ್ಳೆಯದು. ಭಾರತ ದೇಶ ಮತ್ತು ವಿದೇಶಗಳು ಎಲ್ಲರೂ ಸೇರಿ ದಿಲ್ಲಿಯ ಮೇಲೆ ಪ್ರಭಾವವನ್ನು ತೋರಿಸಿರಿ. ಡಿಲ್ಲಿಯನ್ನು ನಿಮ್ಮ ರಾಜಧಾನಿಯನ್ನಾಗಿ ಮಾಡಿಕೊಳ್ಳಬೇಕಲ್ಲವೇ, ಹಾಗಾದರೆ ಮೊದಲು ರಾಜಧಾನಿಯನ್ನಾಗಿ ತಯಾರು ಮಾಡಿಕೊಂಡರೆ ರಾಜ್ಯವನ್ನು ಮಾಡಬಲ್ಲಿರಿ ತಾನೇ. ದಿಲ್ಲಿಯಲ್ಲಿ ನಾಲ್ಕು ಕಡೆ ಪ್ರಭಾವವನ್ನು ಹಾಕಿರಿ. ಭಾರತ ದೇಶದ ವಿ.ಐ.ಪಿಗಳೆಲ್ಲರೂ ಜಾಗೃತರಾಗಬೇಕು. ಭಾರತ ದೇಶದ ಮಕ್ಕಳು ಸಹ ಮಾಡುತ್ತಾರೆ ಅಲ್ಲವೇ. ಒಳ್ಳೆಯದು. ಭಾರತ ದೇಶವು ಸಹ ಕಡಿಮೆಯಲ್ಲ ಒಳ್ಳೊಳ್ಳೆಯ ಮಕ್ಕಳು ಬಂದಿದ್ದಾರೆ ಒಳ್ಳೆಯದು.

ಈಗ ಈ ವರ್ಷ ಯಾವ ನವೀನತೆಯನ್ನು ಮಾಡುತ್ತೀರಿ? ಇಲ್ಲಿಯವರೆಗೆ ಬಾಪ್‌ದಾದಾ ಯಾವ ಕಾರ್ಯವನ್ನಾದರೆ ಕೊಟ್ಟಿದ್ದರೋ ಅದನ್ನು ಮಾಡಲಿಲ್ಲ. ಮೈಕ್ ಅಥವಾ ವಾರಸರನ್ನು ತನ್ನಿರಿ ಎಂದು ಹೇಳಿದ್ದರು. ಆದರೆ ಎಲ್ಲಿ ತಂದಿದ್ದೀರಿ. ವೇಟ್ ಅಂಡ್ ಸಿ. ಮೈಕಾದವರು ಪ್ರತ್ಯಕ್ಷತೆಯ ದ್ವಜವನ್ನು ಹಾರಿಸುವುದರಲ್ಲಿ ಬುದ್ಧಿ ಉಳ್ಳವರಾಗಿರುತ್ತಾರೆ. ಬೇರೆ ಬೇರೆ ದೇಶಗಳಲ್ಲಿ ಕೆಲವರು ಮೈಕಾಗಿ ಇದ್ದಾರೆ ಆದರೆ ಸಂಘಟಿತ ರೂಪದಲ್ಲಿ ಬಾಪ್‌ದಾದಾರವರ ಎದುರಿಗೆ ಬಂದಿಲ್ಲ. ಈಗ ಅವರೆಲ್ಲರನ್ನು ಸೇರಿಸಿ. ಎಲ್ಲರನ್ನೂ ಸೇರಿಸುವುದರಿಂದ ಏನಾಗುತ್ತದೆ? ಒಬ್ಬರನ್ನೊಬ್ಬರು ನೋಡಿ ಉತ್ಸಾಹ ಉಲ್ಲಾಸಗಳು ಬರುತ್ತವೆ. ಭಾರತ ದೇಶದಲ್ಲಿಯೂ ಸಹ ಮೈಕ್ ಬೇಕು. ಮತ್ತು ವಿದೇಶದಲ್ಲಿಯೂ ಸಹ ತಯಾರಾಗುತ್ತಿದ್ದಾರಲ್ಲವೇ? ಆದರೆ ಈಗ ಅವರು ಗುಪ್ತವಾಗಿದ್ದಾರೆ. ಪರದೆಯ ಒಳಗಿದ್ದಾರೆ. ಅವರನ್ನು ಹೊರಗೆ ತನ್ನಿರಿ. ತರಬೇಕಲ್ಲವೇ? ಬಹಳ ಒಳ್ಳೆಯದು. ಮಾತೆಯರು ಬಹಳ ಜನರಿದ್ದಾರೆ. ನಿಲ್ಲಲು ಹೇಳಿದರೆ ಹಾಲ್ ಮುಚ್ಚಿ ಹೋಗುತ್ತದೆ. ಬಾಪ್‌ದಾದಾ ಮಾತೆಯರನ್ನು ನೋಡಿದಾಗ ಖುಷಿ ಪಡುತ್ತಾರೆ ಏಕೆ? ಏಕೆಂದರೆ ಬಾಪ್‌ದಾದಾರವರಿಂದ ಮಾತೆಯರಿಗೇ ಅವಕಾಶ ಲಭಿಸುತ್ತದೆ. ದ್ವಾಪರ, ಕಲಿಯುಗಗಳಲ್ಲಿ ಲಭಿಸಲಿಲ್ಲ. ಈಗ ಲಭಿಸುತ್ತಿದೆ. ಮಹಾನ್ ಆತ್ಮರಲ್ಲಿ ಸಹ ದಿನದಿಂದ ದಿನಕ್ಕೆ ಹೆಚ್ಚು ಅವಕಾಶ ಲಭಿಸುತ್ತದೆ. ಪ್ರಭುತ್ವದಲ್ಲಿಯೂ ಸಹ ಮಾತೆಯರಿಗೆ ಸೇವೆ ಮಾಡುವ ಅವಕಾಶವು ಲಭಿಸುತ್ತದೆ. ಬಾಪ್‌ದಾದಾ ಸದಾ ಹೇಳುತ್ತಿರುತ್ತಾರೆ- ಮಾತೆಯರು ಯಾವ ಸೆಂಟರ್ನಲ್ಲಿ ಇದ್ದರೆ ಆ ಸೆಂಟರ್ ಸದಾ ಫಲೀಬೂತವಾಗಿ ಇರುತ್ತದೆ. ಅವರು ಸಂಪಾದಿಸದಿದ್ದರೂ ಹೃದಯವು ಬಹಳ

ವಿಶಾಲವಾಗಿರುತ್ತದೆ. ಬಾಬಾ ಸಹ ಭಾವನೆ ಮತ್ತು ಸತ್ಯವಾದ ಹೃದಯವನ್ನೇ ಇಷ್ಟಪಡುತ್ತಾರೆ. ಪ್ರತಿಯೊಂದು ಗ್ರೂಪನ್ನು ನೋಡಿದರೂ ಮಾತೆಯರು ಹೆಚ್ಚಾಗಿಯೇ ಇದ್ದಾರೆ. ಮಾತೆಯರು ಈಗ ನಿಮ್ಮ ವಾರಸರನ್ನು ಎಚ್ಚರಗೊಳಿಸಿ, ನೀವು ಎಲ್ಲರನ್ನೂ ತನ್ನಿರಿ. ಹಾಲ್ ಸ್ವತಹವಾಗಿ ದೊಡ್ಡದಾಗಿ ಬಿಡುತ್ತದೆ. ಈಗಲೇ ಹಾಲ್ ತುಂಬಿ ಹೋಗಿದೆ ಇನ್ನು ಅವರು ಎಲ್ಲಿ ಕುಳಿತುಕೊಳ್ಳುತ್ತಾರೆ ಎಂದು ಯೋಚಿಸಬೇಡಿರಿ. ನೀವು ಕರೆ ತನ್ನಿ ಎಲ್ಲವೂ ಸರಿ ಹೋಗುತ್ತವೆ. ಹೌದು ತಾನೆ, ಏನು ಮಾಡಬೇಕು ಎಂದು ದಾದೀ ಯೋಚಿಸುತ್ತಿಲ್ಲ ತಾನೇ! ಕಡಿಮೆಯಲ್ಲಿ ಕಡಿಮೆ 9 ಲಕ್ಷ ಜನ ಕುಳಿತುಕೊಳ್ಳುವ ರೀತಿಯಾಗಿ ಇರಬೇಕು. ಇಷ್ಟು ಜನ ಪ್ರಜೆಗಳನ್ನಾದರೂ ತಯಾರು ಮಾಡುತ್ತೀರಾ? ಇಲ್ಲವೇ? ಯಾವಾಗ ಮಾಡುತ್ತೀರಿ? ಆ ದಿನಾಂಕವನ್ನು ನಿರ್ಣಯಿಸಿರಿ. ಮೊದಲು ಒಂಬತ್ತು ಲಕ್ಷ ಜನರನ್ನು ತನ್ನಿರಿ. ಪಾಂಡವರು ತರುತ್ತೀರಾ? ಬಾಪ್‌ದಾದಾ ಹಾಲನ್ನು ತಯಾರು ಮಾಡಿಸುತ್ತಾರೆ. ಆದರೆ ಮೊದಲು ನೀವು 9 ಲಕ್ಷ ಜನರನ್ನು ತನ್ನಿರಿ. (ಒಂದೊಂದು ವರ್ಷ ಒಂದೊಂದು ಲಕ್ಷ ಜನರನ್ನು ತರುತ್ತೇವೆ) ಹಾಗಲ್ಲ ಅವರಂತೂ ಬಂದೇ ಬರುತ್ತಾರೆ. ಅದಕ್ಕೆ ಅಭ್ಯಂತರವೇನು ಇಲ್ಲ. ಆದರೆ ಕೊನೆಗೆ ವೇದಿಕೆಯ ಮೇಲೆ 9 ಲಕ್ಷ ಜನರನ್ನು ತರುತ್ತೀರಾ ಅಥವಾ ಇಲ್ಲವೇ? ತರದಿದ್ದರೆ ರಾಜ್ಯ ಯಾರ ಮೇಲೆ ಮಾಡುತ್ತೀರಿ? ನಿಮ್ಮ ಮೊದಲ ಜನ್ಮದಲ್ಲಿ ಒಂಬತ್ತು ಲಕ್ಷ ಜನರ ಪ್ರಜೆಗಳು ಮತ್ತು ರಾಯಲ್ ಕುಟುಂಬ ಇಲ್ಲದೇ ರಾಜ್ಯ ಯಾರ ಮೇಲೆ ಮಾಡುತ್ತೀರಿ? ಮದುಬನದವರು ಏನು ಯೋಚಿಸುತ್ತಿದ್ದೀರಿ? ಒಂಬತ್ತು ಲಕ್ಷ ಜನರು ಬೇಕೇ? ಬೇಡವೇ? ಮುಖ್ಯವಾಗಿ ಪಾಂಡವರು ಏನೆನ್ನುತ್ತೀರಿ? ಬೇಕೇ? ಬೇಡವೇ? 9 ಲಕ್ಷ ಜನರು ಬಂದರೆ ಸಾಧನಗಳು ಸ್ವತಹವಾಗಿ ತಯಾರಾಗುತ್ತವೆ. ಹಾಲ್ ತಯಾರು ಮಾಡಬೇಕಾಗುತ್ತದೆ ಎಂದು ಭಯಪಡಬೇಡಿರಿ. ನೋಡಿರಿ ಭವಿಷ್ಯವು ಬಹಳ ಬಹಳ ಉಜ್ವಲವಾಗಿ ಇರುತ್ತದೆ. ಸರ್ವಸಾದನಗಳು ಲಭಿಸುತ್ತವೆ. ತಯಾರಾಗಿರುವ ಹಾಲ್ ನಿಮಗೆ ಲಭಿಸುತ್ತದೆ. ತಯಾರು ಮಾಡಬೇಕಾಗಿರುವ ಅವಶ್ಯಕತೆ ಇಲ್ಲ. ಆದರೆ ನೀವು ಈ ವರ್ಷದ ಸ್ಲೋಗನನ್ನು ಸಫಲ ಮಾಡಿಕೊಳ್ಳಿ- ಸಫಲತೆಯು ಲಭಿಸಿಯೇ ಲಭಿಸುತ್ತದೆ. ಇದನ್ನು ನೆನಪಿಟ್ಟುಕೊಳ್ಳಿ.

ಒಳ್ಳೆಯದು. ಒಂದು ಸೆಕೆಂಡಿನಲ್ಲಿ ಮನಸ್ಸಿನ ವ್ಯಾಯಾಮ ನೆನಪು ಇದೆಯೇ? ಪ್ರತಿಯೊಬ್ಬರು ಇಡೀ ದಿನದಲ್ಲಿ ಎಷ್ಟು ಬಾರಿ ಈ ವ್ಯಾಯಾಮವನ್ನು ಮಾಡುತ್ತೀರಿ? ಈ ಮನಸ್ಸಿನ ವ್ಯಾಯಾಮ ಎಷ್ಟು ಬಾರಿ ಮಾಡುತ್ತೀರೋ ಅಷ್ಟು ಬಾರಿ ಸಹಜಯೋಗಿ, ಸರಳಯೋಗಿ ಆಗುತ್ತೀರಿ. ಒಂದುಕಡೆ ಮನಸ್ಸಿನ ಸೇವೆ, ಇನ್ನೊಂದುಕಡೆ ಮನಸ್ಸಿನ ವ್ಯಾಯಾಮ. ಈಗೀಗ ನಿರಾಕಾರಿ, ಈಗೀಗ ಫರಿಶ್ತಾ. ಬ್ರಹ್ಮಾ ತಂದೆ ತಾವು ಫರಿಶ್ತೆಗಳನ್ನು ಆಹ್ವಾನ ಮಾಡುತ್ತಿದ್ದಾರೆ. ಫರಿಶ್ತೆಗಳಾಗಿ ಬ್ರಹ್ಮಾತಂದೆಯ ಜೊತೆಗೆ ತಮ್ಮ ಮನೆಗೆ ನಿರಾಕಾರ ರೂಪದಲ್ಲಿ ಹೋಗಬೇಕು ನಂತರ ದೇವತೆಯರಾಗಬೇಕು. ಒಳ್ಳೆಯದು.

**ನಾಲ್ಕಾರು ಕಡೆಯಿಂದ ಬಹಳ-ಬಹಳ ಸವಿ ನೆನಪು, ಕಾರ್ಡಿನ ರೂಪದಲ್ಲಿ ಆಗಲಿ, ಪತ್ರದ ರೂಪದಲ್ಲಿ ಆಗಲಿ ಬಾಪ್‌ದಾದಾರವರ ಹತ್ತಿರ ತಲುಪಿದೆ. ಬಾಪ್‌ದಾದಾರವರಿಗೆ ಗೊತ್ತಿದೆ- ಪ್ರತಿಯೊಂದು ಮಗು ಇದನ್ನೇ ಯೋಚಿಸುತ್ತದೆ - ನನ್ನ ನೆನಪು ತಂದೆಗೆ ಕೊಡಬೇಕು ಎಂದು. ಆದರೆ ಸಿಕ್ಕಿದೆ. ಸವಿನೆನಪನ್ನು ಕೊಡುವಂತಹ ಮುದ್ದಿನ ಮಕ್ಕಳು ಬಾಪ್‌ದಾದಾರವರ ಮುಂದೆ ಇದ್ದಾರೆ. ಆದ್ದರಿಂದ ಬಾಪ್‌ದಾದಾರವರು ಹೇಳುತ್ತಾರೆ - ಪ್ರತಿಯೊಂದು ಮಗುವಿಗೂ ಹೆಸರಿನಿಂದ ಶುಭಾಶಯಗಳು ಮತ್ತು ಮನಸ್ಸಿನ ಆಶೀರ್ವಾದಗಳನ್ನು ಸ್ವೀಕಾರ ಮಾಡಿ. ತಮ್ಮೆಲ್ಲರಿಗೂ ಸಹ ಹೊಸ**

**ಜೀವನ, ಹೊಸ ಯುಗ ಮತ್ತು ಹೊಸ ವರ್ಷದ ತುಂಬಾ-ತುಂಬಾ ಪದಮ-ಪದಮ-ಪದಮಾಗುಣಷ್ಟು ಶುಭಾಶಯಗಳು ಮತ್ತು ಮನಸ್ಸಿನ ಆಶೀರ್ವಾದಗಳು, ಸವಿನೆನಪು ಮತ್ತು ನಮಸ್ತೆ.**

ರಿವೈಸ್ ಕೋರ್ಸ್ 31-12-2002.

***ಈ ಹೊಸ ವರ್ಷದಲ್ಲಿ ಸರ್ವ ಖಜಾನೆಗಳನ್ನು ಸಫಲ ಮಾಡಿ ಸಫಲತಾ ಮೂರ್ತಿಗಳಾಗುವ ವಿಶೇಷತೆಯನ್ನು ತೋರಿಸಿ***

ಪ್ರೀತಿಯ ಗುರುತಾಗಿದೆ ತಂದೆಗೆ ಏನು ಇಷ್ಟವೋ ಮಕ್ಕಳಿಗೂ ಸಹ ಅದೇ ಇಷ್ಟವೆನಿಸಬೇಕು ಸಮಯ ಸಂಕಲ್ಪ ಮತ್ತು ಸರ್ವಕ ಖಜಾನೆಗಳನ್ನು ಸಫಲ ಮಾಡಿಕೊಳ್ಳಬೇಕು. ವ್ಯರ್ಥ ಮಾಡಿಕೊಳ್ಳಬಾರದು. ಈಗ ಈ ಚಿಕ್ಕಯುಗ ಸಫಲ ಮಾಡಿಕೊಳ್ಳುವ ಯುಗ. ಒಂದು ವೇಳೆ ಈಗ ಸಮಯವನ್ನು ಸಫಲ ಮಾಡಿಕೊಂಡರೆ ಭವಿಷ್ಯದಲ್ಲಿಯೂ ಅರ್ಧ ಕಲ್ಪ ಪೂರ್ತಿ ಸಮಯ ರಾಜ್ಯಾಧಿಕಾರಿ ಆಗುತ್ತಿರಿ ಒಂದು ವೇಳೆ ಆಗಾಗ ಸಫಲ ಮಾಡಿಕೊಂಡರೆ ಆಗಾಗ ರಾಜ್ಯಾಧಿಕಾರಿಯಾಗುತ್ತಿರಿ ಇದೇ ಸಮಯ ಸಫಲ ಸಫಲ ಸಫಲ ಮಾಡಿಕೊಂಡದರ ಪ್ರಾಲಬ್ದವಾಗಿದೆ... ಯಾರು ಸಂಬಂಧದಲ್ಲಿ ಬಂದರೂ ಸಂಪರ್ಕದಲ್ಲಿ ಬಂದರೂ ಅವರಿಗೆ ಯಾವುದೋ ಒಂದು ಶಕ್ತಿ ಅಥವಾ ಗುಣದ ಬಹುಮಾನವನ್ನು ಕೊಡಿ. ಯಾರೂ ಖಾಲಿ ಕೈಗಳಿಂದ ಹೋಗಬಾರದು ಬ್ರಹ್ಮ ತಂದೆ ಏನು ಹೇಳುತ್ತಿದ್ದರೋ ಅದನ್ನೇ ಮಾಡುತ್ತಿದ್ದರು. ಯಾವುದನ್ನು ಯೋಚಿಸುತ್ತಿದ್ದರೋ ಅದನ್ನು ತಕ್ಷಣವೇ ಮಾಡುತ್ತಿದ್ದರು. ತಕ್ಷಣ ದಾನವನ್ನು ಮಾಡಿ ಮಹಾಪುಣ್ಯವನ್ನು ಸಂಪಾದಿಸಿಕೊಂಡರು. ದೇವತೆ ಅರ್ಥಾತ್ ದಿವ್ಯ ಗುಣಗಳುಳ್ಳವರು. ದಿವ್ಯ ಗುಣಗಳನ್ನು ಯಾವಾಗಲೂ ಬಿಡಬಾರದು ಎನ್ನುತ್ತಾ ನವಯುಗದ ರಚೈತನಾದ ಬಾಪ್‌ದಾದಾ ತನ್ನ ಮಕ್ಕಳನ್ನು ನೋಡುತ್ತಾ ಮಾತನಾಡುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಶಾಂತ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸರ್ವಪ್ರಾಪ್ತಿಗಳಿರುವ ಸ್ವರ್ಣಿಮ ಪ್ರಪಂಚದ ಕೊಡುಗೆಗೆ ಅಧಿಕಾರಿಯಾಗಿದ್ದೇನೆ.

2. ನಾನು ಸಂಗಮ ಯುಗದಲ್ಲಿ ಸ್ವರಾಜ್ಯಾಧಿಕಾರಿ ಅರ್ಥಾತ್ ರಾಜನು, ಭವಿಷ್ಯದಲ್ಲಿಯೂ ರಾಜನು.

3. ನಾನು ರಾಜಯೋಗಿ.

4. ನಾನು ಸಂಗಮ ಯುಗದಲ್ಲಿ ಹೃದಯ ಸಿಂಹಾಸನಾಧಿಕಾರಿಯಾಗಿ, ಸ್ವರಾಜ್ಯಾಧಿಕಾರಿಯಾಗಿ, ರಾಜಾ ಮಗುವಾಗಿ ಭವಿಷ್ಯ ರಾಜ್ಯವನ್ನು ಪಡೆದಿದ್ದೇನೆ.

5. ನನಗೆ ಸಂಗಮ ಯುಗದಲ್ಲಿ (ಮೋಜಿನ ಯುಗ, ಪರಮಾತ್ಮನ ಮಿಲನದ ಆನಂದ) ಎಲ್ಲಾ ಸಹೋದರಿ, ಸಹೋದರರೆಲ್ಲರನ್ನು ಪರಮಾತ್ಮ ತಂದೆಯವರನ್ನಾಗಿ ಮಾಡಬೇಕು ಎಂಬ ಉತ್ಸಾಹ ಉಲ್ಲಾಸಗಳಿವೆ.

6. ನಾನು ಸಹಜಯೋಗಿ.

7. ನಾನು "ನಾನು ಯಾರು" ಎಂಬ ಸ್ವಮಾನವನ್ನು ಸ್ಮೃತಿಯಲ್ಲಿ ತಂದು ಪುರುಷಾರ್ಥವನ್ನು ರಮಣೀಕವಾಗಿ, ಸಹಜವಾಗಿ, ಮಜವಾಗಿ ಮಾಡಿಕೊಂಡಿದ್ದೇನೆ ಮತ್ತು ನನ್ನದು ಎಂಬ ಮಾತನಾಡುತ್ತಿರುವಾಗ ನನ್ನ ಬಾಬಾ ಎಂಬ ಸ್ಮೃತಿ ಇದೆ.

8. ಈ ಹೊಸ ವರ್ಷದಲ್ಲಿ ನನ್ನ ಪುರುಷಾರ್ಥ ಶ್ರೇಷ್ಠ ಮತ್ತು ಸಹಜವಾಗಿ ಇದೆ.

9. ನಾನು ಮಾಸ್ಟರ್ ದಾತನಾಗಿ ಸಮಯವನ್ನು, ಸಂಕಲ್ಪವನ್ನು, ಗುಣಗಳನ್ನು, ಜ್ಞಾನವನ್ನು, ಶಕ್ತಿಯ ಖಜಾನೆಗಳನ್ನು ಪ್ರತಿದಿನ ಸಫಲ ಮಾಡಿ ಸಫಲತೆಯನ್ನು ಪಡೆಯುವ ಸಫಲತಾ ನಕ್ಷತ್ರ.

10. ತಂದೆಯು ನನಗೆ ಸಫಲತಾ ಭವ! ಎಂಬ ವರದಾನವನ್ನು ಕೊಟ್ಟಿದ್ದಾರೆ.

11. ನಾನು ತಂದೆಯನ್ನು ಅನುಸರಿಸಿ ಸಮಯವನ್ನು, ಸಂಕಲ್ಪವನ್ನು ಮತ್ತು ಸರ್ವ ಖಜಾನೆಗಳನ್ನು ಸಫಲ ಮಾಡಿಕೊಂಡು ಸಫಲತಾ ಮೂರ್ತಿ ಆಗಿದ್ದೇನೆ.

12. ನಾನು ಬ್ರಹ್ಮಾ ತಂದೆಯ  ಸಮಾನವಾಗಿ ಯಾವುದನ್ನು ಯೋಚಿಸುತ್ತೇನೆಯೋ ಅದನ್ನು ತಕ್ಷಣ ಪ್ರತ್ಯಕ್ಷದಲ್ಲಿ ಮಾಡಿ ತೋರಿಸಿದ್ದೇನೆ.

13. ನಾನು ಸಂಗಮ ಯುಗದಲ್ಲಿ (ಸಮರ್ಥಯುಗ, ಸಫಲತಾ ಯುಗ) ಸಮಯವನ್ನು ಸಫಲ ಮಾಡಿ ಅರ್ಧಕಲ್ಪ ಪೂರ್ತಿ ಸಮಯ ರಾಜ್ಯಾಧಿಕಾರಿಯಾಗಿ, ಶ್ವಾಸವನ್ನು ಸಫಲ ಮಾಡಿ 21 ಜನ್ಮಗಳ ಆರೋಗ್ಯವನ್ನು, ಜ್ಞಾನವನ್ನು ಸಫಲ ಮಾಡಿ ಬುದ್ಧಿಯುಳ್ಳವನಾಗಿ (ಮಂತ್ರಿಗಳ ಅವಶ್ಯಕತೆ ಇಲ್ಲದೆ) ವಿಕಾರಗಳನ್ನು ಜಯಿಸಿ ನಂಬರ್ ಒನ್ ಆಗಿದ್ದೇನೆ.

14. ಯಾರು ಸಂಬಂಧದಲ್ಲಿ ಸಂಪರ್ಕದಲ್ಲಿ ಬಂದರೂ ಅವರಿಗೆ ನಾನು ಗುಣ ದಾನ, ಶಕ್ತಿಗಳ ದಾನ, ತಂದೆಯ ಸಂದೇಶದ ಮಧುರವಾದ ಮಾತು, ಮಧುರವಾದ ಮುಖವನ್ನು ತೋರಿಸುವ ಮಾಸ್ಟರ್ ದಾತನು.

15. ನಾನು ಯಾವ ಆತ್ಮ ಬಂದರೂ ಆ ಆತ್ಮನಿಗೆ (ಹೇಳಿದಾಗಲೂ ಕೇಳದಿದ್ದರೆ) ಮಧುರವಾದ ಶಕ್ತಿಶಾಲಿ ದೃಷ್ಟಿಯನ್ನು ಕೊಡುತ್ತಿದ್ದೇನೆ.

16. ನಾನು ಬ್ರಹ್ಮಾ ತಂದೆಯ ಸಮಾನವಾಗಿ ತಕ್ಷಣವೇ ದಾನವನ್ನು ಮಾಡಿ ಮಹಾಪುಣ್ಯವನ್ನು ಸಂಪಾದಿಸಿಕೊಳ್ಳುವ ಮಹಾವೀರನು.

17. ತಂದೆ "ಭಾವನೆ ಮತ್ತು ಸತ್ಯವಾದ ಹೃದಯವನ್ನು ಇಷ್ಟಪಡುತ್ತಾರೆ" ಎಂದು ಸ್ಮೃತಿಯಲ್ಲಿಟ್ಟುಕೊಂಡಿದ್ದೇನೆ.

18. ನಾನು ಮನಸಾ ಸೇವೆ, ಕ್ಷಣದಲ್ಲಿ ನಿರಾಕಾರಿ, ಕ್ಷಣದಲ್ಲಿ ಫರಿಶ್ತಾ ಆಗುವ ಮನಸಾ ವ್ಯಾಯಾಮವನ್ನು ಇಡೀ ದಿನದಲ್ಲಿ ಅನೇಕ ಬಾರಿ ಮಾಡಿ ಸಹಜ ಮತ್ತು ಸರಳಯೋಗಿ ಆಗಿದ್ದೇನೆ.

19. ನಾನು ಫರಿಶ್ತಾ ಆಗಿ, ಬ್ರಹ್ಮಾ ತಂದೆಯ ಜೊತೆ ನಿರಾಕಾರ ರೂಪದಲ್ಲಿ ಮನೆಗೆ ಹೋಗಿ ಹಿಂತಿರುಗಿ ದೇವತೆಯಾಗಿದ್ದೇನೆ.